ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 5, MAR-APR 2021, 33-42
©*IIMRD*, Mysuru

IIMRD JOURNALS
www.iimrd.com

# ಕರ್ನಾಟಕದಲ್ಲಿ ಆಹಾರ ಪೂರೈಕೆ ಮತ್ತು ಬಡತನ

**ಡಾ.ಎಲ್. ಶ್ರೀನಿವಾಸ** [1] ಮತ್ತು **ರಾಧಾ ಗಿರಿಯಪ್ಪ ಮಣ್ಣೂರ** [2]

**ಪೀಠಿಕೆ**

1960 ಮತ್ತು 1970ರ ದಶಕದಲ್ಲಿ ಭಾರತ ದೇಶವು ತೀವ್ರ ರೀತಿಯಾದ ಆಹಾರ ಧಾನ್ಯಗಳ ಕೊರತೆಯನ್ನು ಅನುಭವಿಸುತಿತ್ತು. ಈ ಕೊರತೆಯನ್ನು ಸರಿದೂಗಿಸಲು ಭಾರತ ಸರಕಾರವು ಅಭಿವೃದ್ಧಿ ಹೊಂದಿದ ದೇಶವಾದ ಅಮೆರಿಕದಿಂದ ಗೋಧಿಯನ್ನು ಅನಿವಾರ್ಯವಾಗಿ ಆಮದು ಮಾಡಿಕೊಳ್ಳುತ್ತಿತ್ತು. 1960–70ರ ದಶಕದಲ್ಲಿದ್ದ ಪರಿಸ್ಥಿತಿಯಿಂದ ಸುಧಾರಿಸಿಕೊಂಡು ದೇಶವು ಇಂದು ಎಲ್ಲಾ ವರ್ಗ, ಜಾತಿ ಮತ್ತು ಧರ್ಮದ ನಾಗರಿಕರಿಗೆ ಸಮಾನವಾದ ಆಹಾರ ಲಭ್ಯತೆಯ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ದೇಶದ ಶೇಕಡಾ 67% ಜನರಿಗೆ ಆಹಾರ ಭದ್ರತೆಯನ್ನು ಒದಗಿಸುವ ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆ–2013ರಲ್ಲಿ ಜಾರಿಗೆ ತಂದಿದೆ.

ಇದಕ್ಕೂ ಮೊದಲು ದೇಶದಲ್ಲಿ ಸಾರ್ವಜನಿಕ ಆಹಾರ ವಿತರಣಾ ಪದ್ಧತಿಯು ಈ ಹಿಂದೆ ಆಗಿರುವ ಬರಗಾಲಗಳೊಂದಿಗೆ ಸಂಬಂಧವನ್ನು ಹೊಂದಿದೆ ಮತ್ತು ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿ ದೇಶವು ತಿವ್ರ ರೀತಿಯಲ್ಲಿ ಆಹಾರದ ಕೊರತೆಯನ್ನು ಎದರಿಸುತ್ತಿತ್ತು. ಇದರಲ್ಲಿ ಪ್ರಥಮವಾಗಿ 1770ರಲ್ಲಿ ಉಂಟಾದ ಬರಗಾಲ ಕ್ಷಾಮ (ಬರಗಾಲ)ವು ಅತಿ ಪ್ರಮುಖವಾಗಿದೆ. 1860 ರಿಂದ 1910ರ ವರೆಗೆ ದೇಶದಲ್ಲಿ ಒಟ್ಟು 20 ಬಾರಿ ಕ್ಷಾಮ ಮತ್ತು ದೇಶವು ತಿವ್ರ ಆಹಾರದ ಕೊರತೆಯನ್ನು ಎದರಿಸಿತ್ತು. ಬಿಟಿಷರ ಆಳ್ವಿಕೆಯಲ್ಲಿ ಕೊನೆಯಲ್ಲಿ ಕ್ಷಾಮವೆಂದರೆ 1943ರಲ್ಲಿ ಬರಗಾಲ ಕ್ಷಾಮ (ಗೋಸೆ, 1999). ಇದರ ನಂತರದಲ್ಲಿ ದೇಶವು ಸ್ವತಂತ್ರ ಪಡೆದ ಮೇಲೆ ಮತ್ತು ಎರಡನೇಯ ಮಹಾಯದ್ಧದ ಪರಿಣಾಮವಾಗಿ ದೇಶವು ಪುನಃ ಆಹಾರದ ಕೊರತೆಯನ್ನು ಎದರಿಸುವಂತಾಯಿತ್ತು. 1947ರ ಹೊತ್ತಿಗೆ ಸರಿಸುಮಾರು 54 ಮಿಲಿಯನ್ ನಗರ ಪ್ರದೇಶದಲ್ಲಿನ ಜನರಿಗೆ ಸಂವಿಧಾನಾತ್ಮಕವಾಗಿ ಮತ್ತು ಇತರೆ 19 ಮಿಲಿಯನ್ ಜನರಿಗೆ ಬೇರೆಯ ಸಾರ್ವಜನಿಕ ವಿತರಣಾ ಪದ್ಧತಿಯ ಮೂಲಕ ಆಹಾರ ಪದಾರ್ಥಗಳನ್ನು ವಿತರಿಸುವುದು ಪ್ರಾರಂಭಿಸಲಾಯಿತು. (ದಾಂತವಾಲಾ, 1993).

[1] *ಸಹ ಪ್ರಾಧ್ಯಾಪಕರು, ಮಾನವಶಾಸ್ತ್ರ ವಿಭಾಗ, ಕನ್ನಡ ವಿಶ್ವ ವಿದ್ಯಾಲಯ, ವಿದ್ಯಾರಣ್ಯ, ಹಂಪಿ*

[2] *ಸಂಶೋಧನಾ ವಿದ್ಯಾರ್ಥಿನಿ, ಮಾನವಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ*

ಈ ಆಹಾರ ಭದ್ರತೆಯ ಕಾಯಿದೆಯು ಜಾರಿಯಾಗುವ ಪೂರ್ವದಲ್ಲಿ ದೇಶದ ಎಲ್ಲಾ ರಾಜ್ಯಗಳಲ್ಲಿ ಈಗಾಗಲೇ ಜಾರಿಯಲ್ಲಿರುವ ಸಾರ್ವಜನಿಕ ವಿತರಣಾ ವ್ಯವಸ್ಥೆಯ (ಪಿ.ಡಿ.ಎಸ್.) ಮೂಲಕ ಬಡತನ ರೇಖೆಗಂತ ಕೆಳಗಿರುವ ಕುಟುಂಬಗಳಿಗೆ ಪ್ರತಿ ತಿಂಗಳಿಗೆ ಅಕ್ಕಿ, ಸಕ್ಕರೆ, ಗೋಧಿ, ಎಣ್ಣೆಯನ್ನು ಕಡಿಮೆ ಧರ ನಿಗದಿಪಡಿಸಿ ಪೂರೈಸಲಾಗುತಿತ್ತು. ಧರ ಮತ್ತು ಪೂರೈಕೆಯ ಪ್ರಮಾಣವು ಆಯಾ ರಾಜ್ಯಗಳು ನಿರ್ಧರಿಸುತ್ತವೆ. 2013ರ ಆಹಾರ ಭದ್ರತಾ ಕಾಯ್ದಿದೆಯ ಲಾಭವು ಖಂಡಿತ ಬಹುಮುಖ ಆಯಾಮದ್ದಾಗಿರುತ್ತದೆ ಮತ್ತು ಸಮಾಜದ ಬಡತನ ರೇಖೆಯ ಕೆಳಗಿರುವ ಜನತೆಗೆ ಆಹಾರ ದೊರಕುವುದಲ್ಲದೆ, ಪೌಷ್ಟಿಕಾಂಶದ ಕೊರತೆಯನ್ನು ಹೋಗಲಾಡಿಸಿ ಅವರ ಆರೋಗ್ಯದ ಮಟ್ಟವು ಸುಧಾರಿಸಲಿದೆ. ಹೊಟ್ಟೆಪಾಡಿಗಾಗಿ ಪರದಾಡುವ ಅನೇಕ ಕುಟುಂಬಗಳಿಗೆ ಅಹಾರ ಧಾನ್ಯಗಳ ಭರವಸೆ ದೊರೆತು 'ಗೌರವಯುತ ಬಾಳು' ಸಾಗಿಸುವ ಒಂದು ಒಳ್ಳೆಯ ಅವಕಾಶ ದೊರೆಯಲಿದೆ (ಸಂಪಾದಕೀಯ, ಯೋಜನಾ 2013). ಆದರೆ ಈ ಕಾಯಿದೆಯು ಈಗಾಗಲೇ ಚಾಲ್ತಿಯಲ್ಲಿರುವ ಸಾರ್ವಜನಿಕ ಆಹಾರ ವಿತರಣಾ ವ್ಯವಸ್ಥೆಯ ಅಗ್ಯತೆತೆಯ ಪ್ರಶ್ನೆಯನ್ನು ಹುಟ್ಟು ಹಾಕುತ್ತದೆ.

**ಉದ್ದೇಶಗಳು**

ಪ್ರಸ್ತುತ ಪ್ರಬಂಧವನ್ನು ಕೆಳಗಿನ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಲಾಗಿದೆ.

- ಸಾರ್ವಜನಿಕ ಆಹಾರ ವಿತರಣಾ ವ್ಯವಸ್ಥೆಯ ಅಡಿಯಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಯಲ್ಲಿರುವ ಬಡತನ ರೇಖೆಯ ಕೆಳಗಿರುವ ಕುಟುಂಬಗಳು ಮತ್ತು 2011ರ ಜನಗಣತಿಯ ಕುಟುಂಬಗಳನ್ನು ತೌಲನಿಕವಾಗಿ ನೋಡುವುದು.
- ರಾಜ್ಯದಲ್ಲಿರುವ ರಾಜ್ಯದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಡಿರುವ ನ್ಯಾಯಬೆಲೆ ಅಂಗಡಿಗಳನ್ನು ಮತ್ತು ಪ್ರತಿ ಅಂಗಡಿಗಳಿಗೆ ಹಂಚಿಕೆಯಾದ ಪಡಿತರ ಚೀಟಿಗಳು ಜಿಲ್ಲಾವಾರು ಅವಲೋಕಿಸುವುದು.
- ಸಕ್ರೀಯ ನ್ಯಾಯ ಬೆಲೆ ಅಂಗಡಿಗಳು ಮತ್ತು ನಿಷ್ಕ್ರೀಯ ನ್ಯಾಯ ಬೆಲೆ ಅಂಗಡಿಗಳನ್ನು ವಿಶ್ಲೇಷಣೆ ಮಾಡಲಾಗುವುದು.
- ಸರಕಾರದ ಕಾರ್ಯಕ್ರಮಗಳಿಗೆ ಕೆಲವೊಂದು ಸಲಹೆಗಳನ್ನು ನೀಡುವುದು.

**ಮಾಹಿತಿಯ ಮೂಲ**

ಪ್ರಸ್ತುತ ಅಧ್ಯಯನಕ್ಕೆ ಅನುಷಂಗಿಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ರಾಜ್ಯದಲ್ಲಿರುವ ಒಟ್ಟು ಕುಟುಂಬಗಳು ಮತ್ತು ಪಡಿತರ ಚೀಟಿಗಳು**

ಪ್ರಸ್ತುತ ಲೇಖನದಲ್ಲಿ ಎರಡು ಪ್ರಮುಖವಾದ ವಿಷಯಗಳನ್ನು ಚರ್ಚೆಗೆ ಎತ್ತಿಕೊಳ್ಳಲಾಗಿದೆ. ಕರ್ನಾಟಕದಲ್ಲಿರುವ ಜನಗಣತಿ 2011ರ ಒಟ್ಟು ಕುಟುಂಬಗಳನ್ನು ರಾಜ್ಯದಲ್ಲಿರುವ ಬಿಪಿಎಲ್ ಕುಟುಂಬಗಳಿಗೆ ತುಲನೆ ಮಾಡಿ ಕೆಲವೊಂದು ಅಂಕಿ ಅಂಶಗಳೊಂದಿಗೆ ಹಾಗೂ ದಿನಿತ್ಯದ ಜೀವನದಲ್ಲಿ ನಡೆಯುವ ಚಟುವಟಿಕೆಗಳನ್ನು ಮಾಡಿದ ಗ್ರಹಿಕೆಯ ಮತ್ತು ಅವಲೋಕನ ವಿಧಾನದಿಂದ ಬಂದಂತಹ ಮಾಹಿತಿಯನ್ನು ವಿವರವಾಗಿ ಚರ್ಚಿಸಲಾಗಿದೆ. ಒಂದು ಸಾಮಾನ್ಯವಾದ ತಿಳುವಳಿಕೆ ಏನೆಂದರೆ ರಾಜ್ಯದಲ್ಲಿರುವ ಒಟ್ಟು ಕುಟುಂಬಗಳು ಮತ್ತು ಒಟ್ಟು ಬಿಪಿಎಲ್, ಅಂತ್ಯೋದಯ ಕಾರ್ಡಗಳು ಮತ್ತು ಎಪಿಎಲ್ ಕಾರ್ಡಗಳು ಸಮಾವಾಗಿರಬೇಕು. ಆದರೆ ವಾಸ್ತವದಲ್ಲಿ ಇದು ಆಗುತ್ತಿಲ್ಲ ಮತ್ತು ಇದು ಸರಕಾರದ ಲೆಕ್ಕವನ್ನು ದಾರಿ ತಪ್ಪಿಸುತ್ತಿದೆ. ಅದಕ್ಕೆ ಹಲವಾರು ಕಾರಣಗಳಿವೆ. ಈ ಕಾರಣಗಳು ಸರಕಾರದಿಂದಲು ಮತ್ತು ಸಮಾಜದಲ್ಲಿರುವ ಅನೇಕ ರೀತಿಯಿಂದ ಪ್ರಬಲವಾಗಿರುವ ವರ್ಗ, ಜಾತಿಗಳು, ಪಕ್ಷಗಳು ಮತ್ತು ವ್ಯಕ್ತಿಗಳ ಲಾಭಿಗೆ ಒಳಗಾಗಿ ಅನೇಕ ತಪ್ಪುಗಳಿಂದ ಕೂಡಿದೆ. ಇಲಾಖೆಯ ಅಂತರಜಾಲ ತಾಣದಿಂದ ಜಿಲ್ಲೆಯಲ್ಲಿರುವ ನ್ಯಾಯಬೆಲೆ ಅಂಗಡಿಗಳನ್ನು ಸಕ್ರೀಯ ನ್ಯಾಯ ಬೆಲೆ ಅಂಗಡಿಗಳು ನಿಷ್ಕ್ರೀಯ ನ್ಯಾಯ ಬೆಲೆ ಅಂಗಡಿಗಳಾಗಿ ವಿಂಗಡಿಸಿ ವಿಶ್ಲೇಷಣೆ ಮಾಡಲಾಗಿದೆ.

**ದತಾಂಶದ ವಿವರಣೆ**

ದೇಶದಲ್ಲಿರುವ ಪ್ರತಿಯೊಂದು ರಾಜ್ಯಗಳಲ್ಲಿ ಬಿ.ಪಿ.ಎಲ್. ಮತ್ತು ಎ.ಪಿ.ಎಲ್. ಕಾರ್ಡುಗಳನ್ನು ಹೊಂದಿದ ಕುಟುಂಬಗಳಿಗೆ ಆಯಾ ರಾಜ್ಯ ಸರ್ಕಾರಗಳು ನಿಗದಿಪಡಿಸಿದ ದರ ಮತ್ತು ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ನ್ಯಾಯಬೇಲೆಯ ಅಂಗಡಿಯ ಮೂಲಕ ಪ್ರತಿ ತಿಂಗಳು ಕುಟುಂಬಗಳಿಗೆ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಸಾಂಸ್ಕೃತಿಕ, ಭೂ–ಒಡೆತನ, ಜಾತಿ ಪದ್ಧತಿ ಮತ್ತು ವರ್ಗ ಪದ್ಧತಿಯಿಂದಾಗಿ ಅನೇಕ ಕುಟುಂಬಗಳು ಭೂರಹಿತ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇವರಿಗೆ ತಮ್ಮ ದಿನನಿತ್ಯದ ಬೇಕು ಬೇಡಿಕೆಗಳನ್ನು ಪೂರೈಸಿಕೊಳ್ಳಲು ಸಾದ್ಯಾವಾಗುತ್ತಿಲ್ಲ. ಆದ್ದರಿಂದ ಸರ್ಕಾರವು ಈ ಮೇಲೆ ಹೇಳಿದ ಕಾರ್ಯಕ್ರಮವನ್ನು ಜಾರಿಯಲ್ಲಿ ತಂದಿದೆ. ಈ ಕಾರ್ಯಕ್ರಮದಿಂದ ಬಡತನ ರೇಖೆಗಿಂತೆ ಕೆಳಗಿರುವ ಕುಟುಂಬಗಳಿಗೆ ಆಹಾರ ಭದ್ರತೆಯನ್ನು ಒದಗಿಸುವುದಾಗಿದೆ. ಆದರೆ ಇದನ್ನು ಅನೇಕ ಮೇಲ್ವರ್ಗದ ಜನರು ತಮ್ಮ ಪ್ರಭಾವವನ್ನು ಬೆಳೆಸಿ ಅವರು ಕೂಡ ಬಡತನ ರೇಖೆ ಕೆಳಗಿಲ್ಲದ್ದಿದ್ದರೂ ಸರ್ಕಾರದ ಅನೇಕ ಯೋಜನೆಗಳ ಲಾಭವನ್ನು ಪಡೆದುಕೊಳ್ಳಲು ಬಡತನ ರೇಖೆಯ ಕೆಳಗಿರುವ ಕುಟುಂಬಗಳ ಕಾರ್ಡುಗಳನ್ನು ಅಥವಾ ಬಿ.ಪಿ.ಎಲ್. ಕಾರ್ಡನ್ನು ಪಡೆದುಕೊಳ್ಳುತ್ತಿದ್ದಾರೆ.

ಅದ್ದರಿಂದ ಈ ಮೇಲಿನ ಗೊಂದಲವನ್ನು ತಿಳಿದುಕೊಳ್ಳಲು ಅಥವಾ ಅರ್ಥೈಯಿಸಿಕೊಳ್ಳಲು, ಕರ್ನಾಟಕ ರಾಜ್ಯದಲ್ಲಿ ಇರುವ 2011ರ ಒಟ್ಟು ಜನಗಣತಿಯ ಕುಟುಂಬಗಳು ಮತ್ತು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ವೆಬ್ ಸೈಟ್‌ನಲ್ಲಿ ಇರುವ ಒಟ್ಟು ಅಂತ್ಯೋದಯ ಅನ್ನ ಯೋಜನೆಯ (ಎ.ಎ.ವೈ) ಕಾರ್ಡುಗಳನ್ನು ಹೊಂದಿರುವ ಕುಟುಂಬಗಳು, ಬಿ.ಪಿ.ಎಲ್. ಕಾರ್ಡಗಳನ್ನು ಹೊಂದಿರುವ ಕುಟುಂಬಗಳು ಮತ್ತು ಎ.ಪಿ.ಎಲ್. ಕಾರ್ಡುಗಳನ್ನು ಹೊಂದಿರುವ ಕುಟುಂಬಗಳನ್ನು ಕುಡಿಸಿದಾಗ ರಾಜ್ಯದಲ್ಲಿರುವ ಒಟ್ಟು ಕುಟುಂಬಗಳಿಗೆ ಸಮಾವಾಗಿರಬೇಕು ಅಥವಾ ಕಡಿಮೆಯಾಗಿರಬೇಕು. ಆದರೆ ವಾಸ್ತವದಲ್ಲಿ ಇದು ಜನಗಣತಿಯ ಕುಟುಂಬಕ್ಕಿಂತ ಹೆಚ್ಚಿನ ಪ್ರಮಾಣದ ಕುಟುಂಬಗಳನ್ನು ತೋರಿಸುತ್ತದೆ. ಈ ಮೇಲೆ ತಿಳಿಸಿದ ಮಾಹಿತಿಯನ್ನು ಕರ್ನಾಟಕ ರಾಜ್ಯದ 30 ಜಿಲ್ಲೆಗಳಲ್ಲಿರುವ ಒಟ್ಟು ಜನಗಣತಿ ಕುಟುಂಬಗಳೊಂದಿಗೆ ಆಹಾರ ಮತ್ತು ನಾಗರೀಕ ಪೂರೈಕೆ ಸರಬರಾಜು ಇಲಾಖೆಯ ಒಟ್ಟು ಕುಟುಂಬಗಳೊಂದಿಗೆ ತುಲನೆಮಾಡಿ ವಿಶ್ಲೇಷಿಸಲಾಗಿದೆ.

ಕೋಷ್ಟಕ್ 1 ರಲ್ಲಿ ಕೊಟ್ಟಿರುವಂತೆ ಕೇವಲ ಬೆಂಗಳೂರು ನಗರ ಜಿಲ್ಲೆ, ಬಳ್ಳಾರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜನಗಣತಿಗಿಂತ ಇಲಾಖೆಯು ವಿತರಿಸಿರುವ ಕಾರ್ಡುಗಳು ಕಡಿಮೆ ಪ್ರಮಾಣದಲ್ಲಿವೆ. ಆದರೆ ಉಳಿದ ಎಲ್ಲಾ ಜಿಲ್ಲೆಗಳಲ್ಲಿ ಇದು ಹೆಚ್ಚಿನ ಪ್ರಮಾಣದಲ್ಲಿ ಇರುವುದನ್ನು ಖಚಿತಪಡಿಸುತ್ತದೆ. ಉದಾಹರಣೆ: ಕರ್ನಾಟಕ ರಾಜ್ಯದಲ್ಲಿ ಒಟ್ಟು **1,31,79,911** ಜನಗಣತಿ ಕುಟುಂಬಗಳು ಇವೆ ಆದರೆ ಇಲಾಖೆಯು **1,37,45,350** ಕಾರ್ಡಗಳನ್ನು ವಿತರಿಸಿದೆ. ಇದರಲ್ಲಿ **5,65,439** ಕಾರ್ಡುಗಳು ನಕಲು/ಒಂದೇ ಕುಟುಂಬಕ್ಕೆ ಎರಡಕ್ಕಿಂಡ ಹೆಚ್ಚಿನ ಕಾರ್ಡುಗಳನ್ನು ಹೊಂದಿರುವ ಸಾಧ್ಯತೆಯಿದೆ. ಇದೇ ಮಾಹಿತಿಯನ್ನು ಈ ಮೇಲೆ ತಿಳಿಸಿದ ಮೂರು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದ ಕಾರ್ಡುಗಳನ್ನು ಹೊಂದಿರುವ ಕುಟುಂಬಗಳಿವೆ.

**ಕೊಷ್ಟಕ 1: ಜಿಲ್ಲಾವಾರು ಕಡುಬಡತನ, ಬಡತನ ರೇಖೆಗಿಂತ ಕೆಳಗಿರುವ ಮತ್ತು ಬಡತನ ರೇಖೆಗಿಂತ ಮೇಲಿರುವ ಕುಟುಂಬಗಳು, ಕರ್ನಾಟಕ, 2014**

| ಜಿಲ್ಲೆ/ಉಪವಿಭಾಗ | ಜನಗಣತಿ ಕುಟುಂಗಳು | ಎಎವೈ | ಬಿಪಿಎಲ್ | ಎಪಿಎಲ್ | ಒಟ್ಟು | ವ್ಯತ್ಯಾಸ (ಹೆಚ್ಚುವರಿ) |
|---|---|---|---|---|---|---|
| ಬಾಗಲಕೋಟೆ | 355377 | 47160 | 282335 | 106539 | 436034 | –80657 |
| ಬೆಂಗಳೂರು ನಗರ | 2377056 | 12743 | 408366 | 151071 | 572180 | 1804876 |
| ಬೆಂಗಳೂರು ಕೇಂದ್ರ | | 1651 | 21396 | 43050 | 66097 | –66097 |

| | | | | | | |
|---|---|---|---|---|---|---|
| ಬೆಂಗಳೂರು ಪೂರ್ವ | | 2620 | 35560 | 115202 | 153382 | –153382 |
| ಬೆಂಗಳೂರು ಉತ್ತರ | | 1792 | 47323 | 100784 | 149899 | –149899 |
| ಬೆಂಗಳೂರು ದಕ್ಷಿಣ | | 4968 | 69324 | 102328 | 176620 | –176620 |
| ಬೆಂಗಳೂರು ಪಶ್ಚಿಮ | | 4377 | 87941 | 166040 | 258358 | –258358 |
| ಬೆಂಗಳೂರು ಗ್ರಾಮೀಣ | 224745 | 14669 | 182179 | 42554 | 239402 | –14657 |
| ಬೆಳಗಾವಿ | 963825 | 83744 | 653274 | 246680 | 983698 | –19873 |
| ಬಳ್ಳಾರಿ | 481704 | 16610 | 306141 | 121214 | 443965 | 37739 |
| ಬೀದರ | 313521 | 40728 | 249114 | 103339 | 393181 | –79660 |
| ಬಿಜಾಪುರ | 405076 | 47067 | 322707 | 110293 | 480067 | –74991 |
| ಚಾಮರಾಜನಗರ | 244198 | 36026 | 205425 | 47737 | 289188 | –44990 |
| ಚಿಕ್ಕಮಗಳೂರು | 272173 | 22916 | 202914 | 75636 | 301466 | –29293 |
| ಚಿತ್ರದುರ್ಗ | 354143 | 43628 | 303148 | 46689 | 393465 | –39322 |
| ಚಿಕ್ಕಬಳ್ಳಾಪುರ | 282311 | 29342 | 256664 | 50157 | 336163 | –53852 |
| ದಕ್ಷಿಣ ಕನ್ನಡ | 425291 | 21703 | 179721 | 220716 | 422140 | 3151 |
| ದಾವಣಗೆರೆ | 404840 | 51330 | 341024 | 72390 | 464744 | –59904 |
| ಧಾರವಾಡ | 372054 | 30716 | 291051 | 102914 | 424681 | –52627 |
| ಗದಗ | 215602 | 29696 | 175660 | 58448 | 263804 | –48202 |
| ಗುಲ್ಬರ್ಗಾ | 405245 | 65382 | 406002 | 129341 | 600725 | –195480 |
| ಹಾಸನ | 429292 | 23751 | 390351 | 58561 | 472663 | –43371 |
| ಹಾವೇರಿ | 325456 | 47881 | 267084 | 65079 | 380044 | –54588 |
| ಕೊಡಗು | 138303 | 10462 | 92175 | 47005 | 149642 | –11339 |
| ಕೋಲಾರ | 330990 | 30359 | 278850 | 60484 | 369693 | –38703 |

| | | | | | | |
|---|---|---|---|---|---|---|
| ಕೊಪ್ಪಳ | 259396 | 38405 | 214027 | 41883 | 294315 | –34919 |
| ಮಂಡ್ಯ | 426578 | 35156 | 393227 | 96107 | 524490 | –97912 |
| ಮೈಸೂರು | 688422 | 50969 | 546003 | 188591 | 785563 | –97141 |
| ಊಾಯಚೂರು | 359337 | 56080 | 249252 | 89233 | 394565 | –35228 |
| ರಾಮನಗರ | 259794 | 19283 | 251134 | 50893 | 321310 | –61516 |
| ಶಿವಮೊಗ್ಗ | 402139 | 38683 | 275924 | 119585 | 434192 | –32053 |
| ತುಮಕುರು | 636394 | 50433 | 503369 | 125553 | 679355 | –42961 |
| ಉಡುಪಿ | 246313 | 18868 | 120498 | 125300 | 264666 | –18353 |
| ಉತ್ತರ ಕನ್ನಡ | 319912 | 16310 | 226987 | 120671 | 363968 | –44056 |
| ಯಾದಗಿರಿ | 200424 | 30452 | 167709 | 36464 | 234625 | –34201 |
| **ಒಟ್ಟು** | **131799<br>11** | **11229<br>60** | **90038<br>59** | **36185<br>31** | **137453<br>50** | **–565439** |

**ಮೂಲ: ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ವರದಿ (2014) ಬೆಂಗಳೂರು.**

ಕೋಷ್ಟಕ 2ರಲ್ಲಿ ಕೊಟ್ಟಿರುವಂತೆ ರಾಜ್ಯದ ಜಿಲ್ಲೆಗಳಲ್ಲಿರುವ ಸಕ್ರೀಯ ಮತ್ತು ನಿಷ್ಕ್ರಿಯ ನ್ಯಾಯಬೆಲೆ ಅಂಗಡಿಗಳನ್ನು ಮೊದಲು ನೋಡೋಣ ನಂತರದಲ್ಲಿ ಪ್ರತಿ ಅಂಗಡಿಗಳಿಗೆ ಹಂಚಿಕೆಯಾಗಿರುವ ಪಡಿತರ ಚೀಟಿಗಳನ್ನು ಅವಲೋಕಿಸಿಲಾಗಿದೆ.

ಮೊದಲು ಸಕ್ರೀಯ ಮತ್ತು ನಿಷ್ಕ್ರೀಯ ನ್ಯಾಯಬೆಲೆ ಅಂಗಡಿಗಳ ಬಗ್ಗೆ ವಿಶ್ಲೇಷಿಸೋಣ. ಒಟ್ಟು ಕರ್ನಾಟಕ ರಾಜ್ಯದಲ್ಲಿ ಸಕ್ರೀಯವಾಗಿ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಬೆಲೆ ಅಂಗಡಿಗಳು ಸುಮಾರು 20813 ಅಂಗಡಿಗಳಿವೆ ಅದರಲ್ಲಿ ಅತಿ ಹೆಚ್ಚಿನ ಸಕ್ರೀಯ ನ್ಯಾಯಬೆಲೆ ಅಂಗಡಿಗಳು ಬೆಳಗಾವಿ (1742), ಮೈಸೂರು (1058) ಮತ್ತು ತುಮಕೂರು (1096) ಜಿಲ್ಲೆಗಳಿವೆ. ಅತಿ ಕಡಿಮೆ ಅಂಗಡಿಗಳು ಬೆಂಗಳೂರು ಕೇಂದ್ರ ವಿಬಾಗವನ್ನು ಹೊರತುಪಡಿಸಿ ಉಡುಪಿ (293), ಕೊಡಗು (304), ಗದಗ (367) ಮತ್ತು ಯಾದಗಿರಿ (398) ಜಿಲ್ಲೆಗಳಲ್ಲಿವೆ. ರಾಜ್ಯದಲ್ಲಿಯೇ ಭೌಗೋಳಿಕವಾಗಿ ದೊಡ್ಡ ಜಿಲ್ಲೆಯಾಗಿರುವ ಬೆಳಗಾವಿಯಲ್ಲಿ ಹೆಚ್ಚಿರುವುದು ಸಹಜ. ಆದರೆ ಚಿಕ್ಕ ಜಿಲ್ಲೆಗಳಾದ ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ನ್ಯಾಯಬೆಲೆ ಅಂಗಡಿಗಳು ಹೆಚ್ಚಿರುವದು ಸಂಶಯಕ್ಕೆ ಎಡೆಮಾಡಿ ಹೆಚ್ಚಿನ ಸಂಶೋಧನಕ್ಕೆ ಬಹಳ ಪ್ರಮುಖವಾದ ಅಂಶವಾಗಿರುತ್ತದೆ.

ಇನ್ನು ನಿಷ್ಕ್ರೀಯ ನ್ಯಾಯಬೆಲೆ ಅಂಗಡಿಗಳ ಬಗ್ಗೆ ಹೇಳುವುದಾದರೆ ರಾಜ್ಯದಲ್ಲಿ ಒಟ್ಟು 2345 ನ್ಯಾಯ ಬೆಲೆ ಅಂಗಡಿಗಳು ಅನುಮತಿಯನ್ನು ಪಡೆದು ಯಾವುದೇ ವ್ಯವಹಾರವನ್ನು ಮಾಡದೇ

ತಟಸ್ಥವಾಗಿವೆ. ಇವುಗಳಲ್ಲಿ ಅತಿ ಹೆಚ್ಚಾಗಿ ಬೆಂಗಳೂರು ನಗರ (282), ಕೋಲಾರ (205) ಮತ್ತು ಶಿವಮೊಗ್ಗ (174) ಜಿಲ್ಲೆಗಳಲ್ಲಿವೆ. ಇನ್ನು ಒಂದು ಪ್ರಮುಖವಾದ ಅಂಶವೆಂದರೆ ಬೆಂಗಳೂರು ಉಪ ವಿಭಾಗದಲ್ಲಿ ಅತಿ ಹೆಚ್ಚಿನ ನ್ಯಾಯಬೆಲೆ ಅಂಗಡಿಗಳು ಗ್ರಾಹಕರಿಗೆ ಯಾವುದೇ ಸೇವೆಯನ್ನು ಒದಗಿಸದೆ ನಿಷ್ಕ್ರೀಯವಾಗಿವೆ. ಅತಿ ಕಡಿಮೆಯ ನಿಷ್ಕ್ರೀಯ ಅಂಗಡಿಗಳು ಬಾಗಲಕೋಟೆ (72), ಚಾಮರಾಜನಗರ ಮತ್ತು ಹಾಸನ (6), ಉತ್ತರ ಕನ್ನಡ (4), ಯಾದಗಿರ (3), ಬೀದರ (2) ಜಿಲ್ಲೆಗಳಲ್ಲಿನ ನ್ಯಾಯಬೆಲೆ ಅಂಗಡಿಗಳು ಗ್ರಾಹಕರಿಗೆ ಯಾವುದೇ ಸೇವೆಯನ್ನು ಒದಗಿಸುತ್ತಿಲ್ಲ. ಬಹಳ ಕೂತುಹಲವಾದ ಅಂಶವೆಂದರೇ ಬೆಂಗಳೂರು ಗ್ರಾಮೀಣ (0) ಜಿಲ್ಲೆಯಲ್ಲಿ ಅನುಮತಿ ಪಡೆದ ಎಲ್ಲಾ ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ.

ಮೇಲಿನ ವಿಶ್ಲೇಷಣೆಯಿಂದ ತಿಳಿದು ಬರುವುದೇನೆಂದರೆ ಕೆಲವೊಂದು ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸದೆ ಇರುವ ನ್ಯಾಯಬೆಲೆ ಅಂಗಡಿಗಳನ್ನು ಮುಚ್ಚಿಸಿ. ಒಂದು ವೇಳೆ ಅವುಗಳಿಗೆ ಇಲಾಖೆಯಿಂದ ಆಹಾರ ಧಾನ್ಯಗಳು ಪೂರೈಕೆಯಾಗುತ್ತಿದ್ದರೆ ಅವುಗಳನ್ನು ಕಡಿತಗೊಳಿಸಿ ಸರಕಾರಕ್ಕೆ ಆಗುವ ಅಪಾರ ಪ್ರಮಾಣದ ನಷ್ಟವನ್ನು ತಪ್ಪಿಸಬಹುದು.

**ಕೊಷ್ಟಕ 2: ಜಿಲ್ಲೆಗಳಲ್ಲಿರುವ ಸಕ್ರೀಯ ಮತ್ತು ನಿಷ್ಕ್ರೀಯ ನ್ಯಾಯ ಬೆಲೆ ಅಂಗಡಿಗಳು ಮತ್ತು ಪ್ರತಿ ನ್ಯಾಯ ಬೆಲೆ ಅಂಗಡಿಗೆ ಹಂಚಿಕೆಯಾದ ಶೇಕಡಾವಾರು ಒಟ್ಟು ಪಡಿತರ ಚೀಟಿಗಳು, ಕರ್ನಾಟಕ, 2014**

| ಜಿಲ್ಲೆ/ಉಪವಿಭಾಗ | ಸಕ್ರೀಯ ನ್ಯಾಯ ಬೆಲೆ ಅಂಗಡಿಗಳು | ನಿಷ್ಕ್ರೀಯ ನ್ಯಾಯ ಬೆಲೆ ಅಂಗಡಿಗಳು | ಒಟ್ಟು ನ್ಯಾಯ ಬೆಲೆ ಅಂಗಡಿಗಳು | ಒಟ್ಟು ಪಡಿತರ ಚೀಟಿಗಳು | ಪ್ರತಿ ಅಂಗಡಿಗೆ ಕಾರ್ಡುಗಳು |
|---|---|---|---|---|---|
| ಬಾಗಲಕೋಟೆ | 689 | 72 | 761 | 436034 | 573 |
| ಬೆಂಗಳೂರು ನಗರ | 543 | 287 | 830 | 572180 | 689 |
| ಬೆಂಗಳೂರು ಕೇಂದ್ರ | 89 | 107 | 196 | 66097 | 337 |
| ಬೆಂಗಳೂರು ಪೂರ್ವ | 189 | 167 | 356 | 153382 | 431 |
| ಬೆಂಗಳೂರು ಉತ್ತರ | 311 | 125 | 436 | 149899 | 344 |
| ಬೆಂಗಳೂರು ದಕ್ಷಿಣ | 261 | 147 | 408 | 176620 | 433 |
| ಬೆಂಗಳೂರು ಪಶ್ಚಿಮ | 375 | 217 | 592 | 258358 | 436 |
| ಬೆಂಗಳೂರು ಗ್ರಾಮೀಣ | 384 | 0 | 384 | 239402 | 623 |
| ಬೆಳಗಾವಿ | 1742 | 106 | 1848 | 983698 | 532 |
| ಬಳ್ಳಾರಿ | 601 | 121 | 722 | 443965 | 615 |

| | | | | | |
|---|---|---|---|---|---|
| ಬೀದರ | 744 | 2 | 746 | 393181 | 527 |
| ವಿಜಯಪುರ | 811 | 14 | 825 | 480067 | 582 |
| ಚಾಮರಾಜನಗರ | 482 | 6 | 488 | 289188 | 593 |
| ಚಿಕ್ಕಮಗಳೂರು | 534 | 32 | 566 | 301466 | 533 |
| ಚಿತ್ರದುರ್ಗ | 586 | 19 | 605 | 393465 | 650 |
| ಚಿಕ್ಕಬಳ್ಳಾಪುರ | 566 | 8 | 574 | 336163 | 586 |
| ದಕ್ಷಿಣ ಕನ್ನಡ | 539 | 99 | 638 | 422140 | 662 |
| ದಾವಣಗೆರೆ | 803 | 31 | 834 | 464744 | 557 |
| ಧಾರವಾಡ | 516 | 74 | 590 | 424681 | 720 |
| ಗದಗ | 367 | 19 | 386 | 263804 | 683 |
| ಕಲಬುರಗಿ | 992 | 78 | 1070 | 600725 | 561 |
| ಹಾಸನ | 913 | 6 | 919 | 472663 | 514 |
| ಹಾವೇರಿ | 467 | 10 | 477 | 380044 | 797 |
| ಕೊಡಗು | 304 | 20 | 324 | 149642 | 462 |
| ಕೋಲಾರ | 639 | 205 | 844 | 369693 | 438 |
| ಕೊಪ್ಪಳ | 441 | 18 | 459 | 294315 | 641 |
| ಮಂಡ್ಯ | 742 | 18 | 760 | 524490 | 690 |
| ಮೈಸೂರು | 1058 | 33 | 1091 | 785563 | 720 |
| ರಾಯಚೂರು | 717 | 46 | 763 | 394565 | 517 |
| ರಾಮನಗರ | 564 | 20 | 584 | 321310 | 550 |
| ಶಿವಮೊಗ್ಗ | 603 | 174 | 777 | 434192 | 559 |
| ತುಮಕುರು | 1096 | 34 | 1130 | 679355 | 601 |
| ಉಡುಪಿ | 293 | 23 | 316 | 264666 | 838 |
| ಉತ್ತರ ಕನ್ನಡ | 454 | 4 | 458 | 363968 | 795 |
| ಯಾದಗಿರಿ | 398 | 3 | 401 | 234625 | 585 |
| **ಒಟ್ಟು** | **20813** | **2345** | **23158** | **13745350** | **594** |

**ಮೂಲ: ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ವರದಿ. (2014), ಬೆಂಗಳೂರು.**

**ಸಾರಾಂಶ ಮತ್ತು ಸಲಹೆಗಳು**

ಕೆಳವರ್ಗದ ಮತ್ತು ಮಧ್ಯಮ ವರ್ಗದ ಜನರ ಜೀವನಾಡಿಯಾಗಿದ್ದ ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ 1990ರ ದಶಕದ ನಂತರದಲ್ಲಿ ಜಾಗತಿಕ ಮಾರುಕಟ್ಟೆ ಮತ್ತು ಆರ್ಥ ವ್ಯವಸ್ಥೆಯಲ್ಲಿ ತಿರ್ವವಾದ ಬದಲಾವಣೆಗಳು ಕಾಣಿಸಿಕೊಳ್ಳಲು ಪ್ರಾರಂಭವಾಗಿತು. ಇದಕ್ಕೆ ಪ್ರಮುಖ ಕಾರಣ 1990ರ ನಂತರ ನಮ್ಮ ಎಲ್ಲಾ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪಾಲಿಸಿಕೊಂಡು ಬರುತ್ತಿರುವ ಹೊಸ ನೀತಿಗಳು. ಇವುಗಳಿಗೆ ನಾವು ಜಾಗತಿಕರಣದ ಪ್ರಭಾವ ಎನ್ನಬಹುದು.

ಈ ಹಿಂದೆ ಇದ್ದ ಹಳದಿ, ಹಸಿರು ಮತ್ತು ಮುಂತಾದ ಕಾರ್ಡುಗಳನ್ನು ಶ್ರೀಮಂತರು ಮತ್ತು ಮೇಲ್ವರ್ಗದವರು ಆ ಕಾರ್ಡುಗಳನ್ನು ಪಡೆಯಲು ಹೆಚ್ಚಿನ ಆಸಕ್ತಿ ತೊರಿಸುತ್ತಿರಲಿಲ್ಲ. ಆದರೆ ಇಂದು ಸರ್ಕಾರವು ದೇಶದ ಎಲ್ಲಾ ಜನರಿಗೆ ನೀಡಬೇಕ್ಕಿದ್ದ ಸೌಲಭ್ಯಗಳನ್ನು ಕಡಿತಗೋಳಿಸಿ ದೇಶದಲ್ಲಿರುವ ಬಡವರನ್ನು ಮೇಲೆತ್ತುವ ಉದ್ದೇಶದಿಂದ 'ಬಡವರಿಗೆ' ಅನೇಕ ರಿತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿವೆ. ಎಲ್ಲಾ ಯೋಜನೆಯ ಲಾಭವನ್ನು ಪಡೆದುಕೊಳ್ಳಲು ದೇಶದಲ್ಲಿರುವ ಎಲ್ಲಾ ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗೆ ಬಿ.ಪಿ.ಎಲ್. ಕಾರ್ಡನ್ನು ಒಂದು ಮಾನದಂಡವನ್ನಾಗಿಸಿದೆ. ಆದ್ದರಿಂದ ಇಂದು ಮೇಲವರ್ಗದವರು ಸಹಿತ ಬಿ.ಪಿ.ಎಲ್. ಕಾರ್ಡುಗಳನ್ನು ಪಡೆಯಲು ಗ್ರಾಮ ಪಂಚಾಯತಿಯ ಸದಸ್ಯರಿಂದ ಹಿಡಿದು ಲೋಕ ಸಭೆಯ ಸದಸ್ಯರ ವರೆಗೆ ತಮ್ಮ ಶಿಪಾರಸುಗಳನ್ನು ತಂದು ಸುಳ್ಳು ಬಿ.ಪಿ.ಎಲ್. ಕಾರ್ಡಗಳನ್ನು ಪಡೆದುಕೊಳ್ಳುತ್ತಾರೆ. ಆದ್ದರಿಂದ ಸರ್ಕರವು ಬಿ.ಪಿ.ಎಲ್., ಎ.ಪಿ.ಎಲ್ ಕಾರ್ಡಗಳನ್ನು ಒಂದು ವಿಳಾಸದ ಮಾನದಂಡಗಳನ್ನಾಗಿ ಅಥವಾ ಸರ್ಕಾರಿ ಯೋಜನೆಯ ಲಾಭಗಳನ್ನು ಪಡೆದುಕೊಳ್ಳಲು ಬಳಸದೆ ಅದರ ಮೂಲ ಮಾತ್ರ ಇಲಾಖೆಯಾದ ಆಹಾರ ಮತ್ತು ನಾಗರಿಕ ಸರಬರಾಜ ಇಲಾಖೆಯ ವತಿಯಿಂದ ವಿತರಿಸುವ ಪದಾರ್ಥಗಳನ್ನು ಪಡೆಯಲು ಮಾತ್ರ ಬಳಸಿಕೊಳ್ಳಬೇಕು.

ಕೆಲವು ಜಿಲ್ಲೆಗಳಲ್ಲಿರುವ ನಿಷ್ಕ್ರೀಯವಾಗಿರುವ ಅಂಗಡಿಗಳನ್ನು ಮೊದಲು ರದ್ದು ಪಡಿಸಿ ನಂತರದಲ್ಲಿ ಪ್ರತಿಯೊಂದು ಅಂಗಡಿಗಳಿಗೆ ನಿರ್ದಿಷ್ಟವಾದ ಪಡಿತರ ಚೀಟಿಗಳನ್ನು ನಿಗದಿಪಡಿಸಬೇಕು ಮತ್ತು ನಿಗದಿ ಪಡಿಸಿದ ಪಡಿತರ ಚೀಟಿಗಳಿಗೆ ಮಾತ್ರ ಆಹಾರ ಧಾನ್ಯಗಳನ್ನು ವಿತರಿಸಬೇಕು. ಪ್ರತಿತಿಂಗಳು ಎಲ್ಲಾ ಅಂಗಡಿಗಳಿಗೆ ಹಂಚಿಕೆಯಾದ ಪಡಿತರ ಚೀಟಿಗಳು ಆಹಾರ ಧಾನ್ಯಗಳನ್ನು ತೆಗೆದುಕೊಳ್ಳುವುದಿಲ್ಲ ಆದ್ದರಿಂದ ಎಷ್ಟು ಪ್ರಮಾಣದ ಆಹಾರ ಧಾನ್ಯಗಳು ಉಳಿಯುತ್ತವೆಯೋ ಅವುಗಳನ್ನು ಸರಕಾರಕ್ಕೆ ಮರಳು ಕೊಡುವ ಬಗ್ಗೆ ಬಹಳ ಕಟ್ಟು ನಿಟ್ಟಾದ ಕಾಯ್ದಿದೆ ಮತ್ತು ಕಾನೂನು ಜಾರಿಯಾಗ ಬೇಕು.

**ಪರಾಮರ್ಶನ ಗ್ರಂಥಗಳು**


- ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ವರದಿ (2014). ಕರ್ನಾಟಕ ಸರ್ಕಾರ, ಬೆಂಗಳೂರು.
- ಬಡವರ ಅನ್ನದ ತಟ್ಟೆಗೆ ಕುಬೇರರ ಕನ್ನ. (2008). ಕರ್ನಾಟಕ ಜನಪರ ವೇದಿಕೆ, ಮಂಡ್ಯ.
- ದಾಂತೆವಾಲಾ, ಎಮ್.ಎಲ್. ವ್ಯವಸಾಯದ ಯೋಜನೆ: ಹಣ ಮತ್ತು ಸಾರ್ವಜನಿಕ ವಿತರಣಾ ಪದ್ಧತಿ, ಭಾರತೀಯ ವ್ಯವಸಾಯಿಕ ಅರ್ಥವ್ಯವಸ್ಥೆ ಪತ್ರಿಕೆ, ವ್ಯಲುಮ್: 48. (2). ಪು.ಸಂ 43
- ಗೋಸೆ, ಅಜಿತ್ ಕುಮಾರ. (1999). ಆಹಾರ ಪೂರೈಕೆ ಮತ್ತು ಕ್ಷಾಮ: ಭಾರತ ಉಪಖಂಡದಲ್ಲಿನ ಕ್ಷಾಮಗಳ ಕುರಿತು ಒಂದು ಅಧ್ಯಯನ. **ಇಲ್ಲಿ** ಜೀನ್ ಡ್ರಿಜ್ (ಸಂ) ಕ್ಷಾಮಗಳ ಆರ್ಥಿಕತೆ, ಎಡ್ವರ್ಡ ಇಗಲರ, ಯು.ಕೆ.
- ಯೋಜನಾ. (ಡಿಸೆಂಬರ 2013). ಸಂಪಾದಕೀಯ. ಮಿನಿಸ್ಟ್ರಿ ಆಫ್ ಬ್ರಾಡ್‌ಕಾಸ್ಟಿಂಗ್ ಅಂಡ್ ಇನಫಾರಮೇಶನ್, ಇಂಡಿಯನ್ ಗೌರ್ನಮೆಂಟ್, ನವದೆಹಲಿ.


IIMRD JOURNALS